ರಾಜ್ಯದಲ್ಲಿ ಕಳೆದ ವರ್ಷ ಮೆಕ್ಕೆಜೋಳ ಖರೀದಿಸಿ ಇದುವರೆಗೂ ರೈತರಿಗೆ ಹಣ ಪಾವತಿಸದೇ ಇರುವುದು.

1654 (1798)

ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ(ಬೈಲಹೊಂಗಲ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ವರ್ಷ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎಷ್ಟೆಷ್ಟು ಮೊತ್ತದ ಮೆಕ್ಕೆಜೋಳವನ್ನು ರೈತರಿಂದ ಖರೀದಿ ಮಾಡಿದ್ದವು. ಜಿಲ್ಲಾವಾರು ಮಾಹಿತಿ ನೀಡುವುದು;

ಆ) ರೈತರಿಂದ ಖರೀದಿ ಮಾಡಿದ ಮೆಕ್ಕೆ ಜೋಳಕ್ಕೆ ಈವರೆವಿಗೂ ಪೂರ್ಣ ಹಣವನ್ನು ಕೊಡದೇ ಇರುವುದು ನಿಜವೇ; ಇದರಲ್ಲಿ ರಾಜ್ಯ ಸರ್ಕಾರ ಎಷ್ಟು ಹಣವನ್ನು ಕೊಡಬೇಕು ಮತ್ತು ಕೇಂದ್ರ ಸರ್ಕಾರ ಎಷ್ಟು ಹಣವನ್ನು ಕೊಡಬೇಕು?

ಇ) ಗೋದಾಮುಗಳಲ್ಲಿ ಸಂಗ್ರಹಿಸಿದ ಮೆಕ್ಕೆ ಜೋಳ ಮತ್ತು ನುಸಿ ಹತ್ತಿ ನಾಶವಾದುದು ನಿಜವೇ? ನಾಶವಾಗಿದ್ದಲ್ಲಿ ಎಷ್ಟು ಮೊತ್ತದ ಮೆಕ್ಕೆ ಜೋಳ ನಾಶವಾಗಿರುವುದು.

ಈ) ಗೋದಾಮುಗಳಲ್ಲಿ ದಾಸ್ತಾನು ಇರುವ ಮೆಕ್ಕೆ ಜೋಳವನ್ನು ಬಡಜನರಿಗೆ ರಿಯಾಯಿತಿ ದರದಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಒದಗಿಸಿದ್ದರೆ ಅವು ನಾಶವಾಗದೆ ರೈತರಿಗೆ ಹಾಗೂ ದನಕರುಗಳಿಗೆ ಉಪಯೋಗವಾಗುತ್ತಿರಲಿಲ್ಲವೆ?

ಉ) ಹಾಗಿದ್ದಲ್ಲಿ ಕೂಡಲೇ ಮಾರಲು ಸರ್ಕಾರ ಕ್ರಮ ತೆಗೆದುಕೊಳ್ಳದೆ ಮತ್ತು ನಿರ್ಲಕ್ಷತನದ ಅಧಿಕಾರಿಗಳಿಂದ ಅವು ನಾಶವಾಗಿರುವುದರಿಂದ ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಡಿ.ಬಿ.ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು):

ಅ) 2000-01ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಕ್ವಿಂಟಾಲ್ ಒಂದಕ್ಕೆ ನಿಗದಿಪಡಿಸಿದ ರೂ.445-00ರ ಕನಿಷ್ಠ ಬೆಂಬಲ ಬೆಲೆಯಲ್ಲಿ ಒಟ್ಟು 382621.024 ಮೆ.ಟನ್ ಮೆಕ್ಕೆಜೋಳವನ್ನು ಖರೀದಿಸಲಾಗಿರುತ್ತದೆ.

ಜಿಲ್ಲಾವಾರು ಖರೀದಿಸಿದ ಪ್ರಮಾಣ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಜಿಲ್ಲೆಗಳು	ಪ್ರಮಾಣ ಮೆ.ಟನ್‌ಗಳಲ್ಲಿ	ಮೌಲ್ಯ
1.	ಕೊಪ್ಪಳ	56 18.000 x 445	ರೂ. 2,50,00,100-00
2.	ಬಳ್ಳಾರಿ	284 27.300 x 445	ರೂ.12,65,01,485-00
3.	ಚಿತ್ರದುರ್ಗ	407 36.661 x 445	ರೂ.18,12,78,141-40
4.	ಹಾಸನ	3 52.000 x 445	ರೂ. 1,44,71,400-00
5.	ಶಿವಮೊಗ್ಗ	438 83.000 x 445	ರೂ.19,52,79,350-00
6.	ಮೈಸೂರು	3 81.000 x 445	ರೂ. 1,50,45,450-00
7.	ಕೊಡಗು	20 14.000 x 445	ರೂ. 1,16,32,300-00
8.	ಕೋಲಾರ	49 25.700 x 445	ರೂ. 2,19,19,365-00
9.	ಹಾವೇರಿ	455 90.549 x 445	ರೂ.20,28,77,943-00
10.	ಬೆಳಗಾಂ	179 31.000 x 445	ರೂ. 7,97,92,950-00
11.	ಬಿಜಾಪುರ	1 80.000 x 445	ರೂ. 52,51,000-00
12.	ಬಾಗಲಕೋಟೆ	11 48.345 x 445	ರೂ. 4,96,10,135-25
13.	ದಾವಣಗೆರೆ	854 72.161 x 445	ರೂ.38,03,51,116-40
14.	ಧಾರವಾಡ	526 42.838 x 445	ರೂ. 23,42,60,629-10
15.	ಗದಗ್	356 63.570 x 445	ರೂ.15,87,02,886-50
16.	ತುಮಕೂರು	54.900 x 445	ರೂ. 6,89,305-00
		3826 21.024 x 445	ರೂ.170,26,63,450-00

ಆ) ಹೌದು. ಪೂರ್ಣ ಹಣವನ್ನು ಕೇಂದ್ರ ಸರ್ಕಾರದವರು ಕೊಡಬೇಕಾಗಿರುತ್ತದೆ.

ಇ) ಗೋದಾಮುಗಳಲ್ಲಿ ಸಂಗ್ರಹಿಸಿರುವ ಮೆಕ್ಕೆಜೋಳ ನುಸಿ ಹತ್ತಿ ನಾಶವಾಗಿರುವ ಬಗ್ಗೆ ಸರ್ಕಾರಕ್ಕೆ ಯಾವುದೇ ವರದಿ ಬಂದಿರುವುದಿಲ್ಲ.

ಈ) 'ಇ'ನಲ್ಲಿ ತಿಳಿಸಿರುವಂತೆ ಮೆಕ್ಕೆಜೋಳ ನಾಶವಾಗಿರುವ ಬಗ್ಗೆ ಯಾವುದೇ ವರದಿ ಬಾರದೆ ಇರುವ ಕಾರಣ, ಬೇರೆ ಯಾವುದೇ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ.

ಉ) ಮೆಕ್ಕೆ ಜೋಳ ನಾಶವಾಗುವ ಮುನ್ನವೆ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಪ್ರಕ್ರಿಯೆ ಈಗಾಗಲೇ ಭಾರತ ಆಹಾರ ನಿಗಮವು ಪ್ರಾರಂಭಿಸಿದೆ.

ರಾಜ್ಯದಲ್ಲಿರುವ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳ ಮೇಲೆ ಲೋಕಾಯುಕ್ತದ ಕೇಸುಗಳು.

1656(1993)

ಶ್ರೀ ಕರಿಯಣ್ಣ (ಹೊಳಿಹೊನ್ನೂರು): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿರುವ ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳ ಮೇಲೆ ಇರುವ ಲೋಕಾಯುಕ್ತರ ಕೇಸುಗಳು ಎಷ್ಟು; ಯಾರ ಯಾರ ಮೇಲೆ ಎಷ್ಟು ಬಾರಿ ಕೇಸುಗಳನ್ನು ದಾಖಲು ಮಾಡಲಾಗಿದೆ? (ಹೆಸರುಗಳೊಂದಿಗೆ ವಿವರ ನೀಡುವುದು):

ಆ. ಇವರುಗಳ ಮೇಲೆ ಲೋಕಾಯುಕ್ತರು ಕೇಸುಗಳನ್ನು ದಾಖಲು ಮಾಡಿದ ಮೇಲೆ ಯಾವ ರೀತಿ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ. (ಹೆಸರುಗಳೊಂದಿಗೆ ವಿವರ ನೀಡುವುದು)

ಇ. ಕೇಸುಗಳು ಎಷ್ಟು ವರ್ಷದಿಂದ ಇತ್ಯರ್ಥವಾಗದೆ ಉಳಿದಿದೆ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು)

ಅ) ಐ.ಎ.ಎಸ್. 4 ಕೇಸುಗಳು